

ವೇಗ, ಇನ್ನಷ್ಟು ಎತ್ತರ ಹಾಗೂ ಇನ್ನಷ್ಟು ಬಲಗಳ ಸ್ಪರ್ಧೆಯೇ ಒಲಿಂಪಿಕ್ಸ್‌ನ ಸೂತ್ರ. 'ಕೀರ್ತಿ ಇರುವುದು ಪದಕ ಗೆಲ್ಲುವುದರಲ್ಲಿ ಅಲ್ಲ, ಪಾಲ್ಗೊಳ್ಳುವುದರಲ್ಲಿ' ಎನ್ನುವುದು ಒಲಿಂಪಿಕ್ಸ್‌ನ ಮುಖ್ಯ ಧ್ಯೇಯ. ಈ ಧ್ಯೇಯ ಈಡೇರಿಕೆಗಾಗಿ ಪ್ರತಿ ಒಲಿಂಪಿಕ್ಸ್‌ನಲ್ಲಿ ಆದ್ಯತೆ. ಪದಕ ಗೆಲ್ಲುವುದು ಬೇರೆ ಮಾತಾದರೂ ಪ್ರತಿ ಕ್ರೀಡಾಪಟುವಿಗೆ 'ಒಮ್ಮೆಯಾದರೂ ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸಬೇಕು' ಎನ್ನುವುದು ಹೆಗ್ಗುರಿ. ಕೋವಿಡ್ ಕಷ್ಟದ ಸಮಯದಲ್ಲಿ, ಹಲವಾರು ವಿರೋಧ, ಪ್ರಯಾಣ ಸೌಲಭ್ಯಗಳ ಕೊರತೆಯ ನಡುವೆಯೂ 200ಕ್ಕೂ ಹೆಚ್ಚು ರಾಷ್ಟ್ರಗಳ 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಜಪಾನ್‌ನ ಟೋಕಿಯೊ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಮೂಲಕ 'ನಾವೆಲ್ಲ ಒಂದು' ಎನ್ನುವ ಸಮೂಹಗೀತೆಯನ್ನು ವಿಶ್ವ ಮತ್ತೊಮ್ಮೆ ಒಕ್ಕೊರಲಿನಿಂದ ಹಾಡಲಿದೆ.

ನಾಲ್ಕು ವರ್ಷಗಳಿಗೊಮ್ಮೆ ಒಲಿಂಪಿಕ್ಸ್ ಬಂದಾಗ ಕ್ರೀಡಾಪಟುಗಳಲ್ಲಿ, ತರಬೇತುದಾರರಲ್ಲಿ, ಸಂಘಟಕರಲ್ಲಿ ಮತ್ತು ಕ್ರೀಡಾಪ್ರೇಮಿಗಳಲ್ಲಿ ಅತೀವ ಸಂಭ್ರಮ. ಆದರೆ, ಜಗತ್ತಿನ ಬಹಳಷ್ಟು ರಾಷ್ಟ್ರಗಳಲ್ಲಿ ಪ್ರಾಣ ಹಿಂಡುತ್ತಿರುವ ಕೋವಿಡ್‌ನಿಂದಾಗಿ ಎಲ್ಲರಲ್ಲಿಯೂ ಈಗ ಮೊದಲಿನಷ್ಟು ಉತ್ಸಾಹ ಉಳಿದಿಲ್ಲ. ಆತಿಥ್ಯದ ಹೊಣೆ ಹೊತ್ತಿರುವ ಜಪಾನ್ ರಾಜಧಾನಿ ಟೋಕಿಯೊ ನಗರ ಮಾತ್ರ ಉತ್ಸಾಹಕ್ಕೇನೂ ಕೊರತೆಯಿಲ್ಲ ಎನ್ನುವ ದಿಟ್ಟತನ ತೋರಿದೆ. ಕೋವಿಡ್ ಸಂಕಷ್ಟವನ್ನು ಒಟ್ಟಾಗಿ ಎದುರಿಸಬೇಕು ಎನ್ನುವ ಸಂದೇಶ ನೀಡಲು ಜಪಾನ್ ಹೊರಟಂತಿದೆ. 'ಜೀವನದಲ್ಲಿ ಸಾಧನೆಯೊಂದೇ

## ಪದಕ ಗಳಿಕೆ: ಅಮೆರಿಕ ಮುಂದೆ

ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವಲ್ಲಿ ಅಮೆರಿಕ ಮತ್ತು ರಷ್ಯಾ ದೇಶಗಳು ಮುಂಚೂಣಿಯಲ್ಲಿವೆ. 1896ರ ಚೊಚ್ಚಲ ಅಥೆನ್ಸ್ ಒಲಿಂಪಿಕ್ಸ್‌ನಿಂದ ಪಾಲ್ಗೊಳ್ಳುತ್ತಿರುವ ಅಮೆರಿಕ ಇದುವರೆಗೆ ಒಟ್ಟು 2,523 ಪದಕಗಳನ್ನು ಜಯಿಸಿದ್ದು, ಚಿನ್ನದ ಪದಕಗಳ ಸಂಖ್ಯೆಯೇ 1,022 ಇದೆ. ರಷ್ಯಾ 1,556 ಪದಕಗಳನ್ನು ಜಯಿಸಿ ಒಟ್ಟು ಪದಕಗಳನ್ನು ಗೆದ್ದವರ ಪಟ್ಟಿಯಲ್ಲಿ ಎರಡನೇ ಸ್ಥಾನ ಹೊಂದಿದೆ.

ಉಳಿದ ಸ್ಥಾನಗಳಲ್ಲಿ ಕ್ರಮವಾಗಿ ಜರ್ಮನಿ (1,346 ಪದಕಗಳು), ಬ್ರಿಟನ್ (851), ಚೀನಾ (546), ಫ್ರಾನ್ಸ್ (716), ಇಟಲಿ (577), ಹಂಗರಿ (491), ಆಸ್ಟ್ರೇಲಿಯಾ (497) ಮತ್ತು ಸ್ವೀಡನ್ (494) ನಂತರದ ಎಂಟು ಸ್ಥಾನಗಳಲ್ಲಿವೆ.